

# ಕಲಾಂಚೋಯಿ

■ ಚಿತ್ರ -ಬರಹ:
ರಾಮಪ್ರಸಾದ ಬಿ.



ಪುಟ್ಟ ಪುಟ್ಟ ಗುಲಾಬಿ, ಕೆಂಪು ಹೂಗಳನ್ನು ತನ್ನೊಡಲಲ್ಲಿಟ್ಟುಕೊಂಡ, ಇತಿಹಾಸದ ವಿಭಿನ್ನ ಶಿಲ್ಪಕಲೆಯ ಚಿತ್ತಾರಗಳನ್ನು ನೆನಪಿಸುವ ಶೈಲಿಯಲ್ಲಿರುವ ಎಲೆಗಳನ್ನು ಹೊಂದಿದ ಪ್ಲಾಂಟೇ ಸಾಮ್ರಾಜ್ಯದ ಕ್ರಾಸ್ಸುಲ್ಲೇಷಿಯೇ (**Crassulaceae**) ಕುಟುಂಬದ ಸೋದರಿ ಈ 'ಕಲಾಂಚೋಯಿ' (**Kalamchoe**). ಇದಕ್ಕೆ ಬ್ರೈಯೋಫಿಲಂ ಎಂದೂ ಕರೆಯುವುದುಂಟು. ಕೆಲವು ಸಸ್ಯ ಶಾಸ್ತ್ರಜ್ಞರು ಬ್ರೈಯೋಫಿಲಂ ಅನ್ನು ಬೇರೆಯದೇ ಸಂಕುಲಕ್ಕೆ ಸೇರಿಸುತ್ತಾರೆ. ಕಲಾಂಚೋಯಿ ಆ್ಯಡನ್ಸ್ ಇದರ ಸಂಕುಲ.

ಈ ಸಂಕುಲದಲ್ಲಿ 125ಕ್ಕೂ ಅಧಿಕ ಜಾತಿಯ ಹೂ ಬಿಡುವ ಸಸ್ಯಗಳಿವೆ. ಜಗತ್ತಿನಾದ್ಯಂತ ಎಲ್ಲೆಡೆ ಕಾಣಸಿಗುವ ಇವುಗಳಲ್ಲಿ 56 ಜಾತಿಯ ಸಸ್ಯಗಳು ದಕ್ಷಿಣ ಮತ್ತು ಪೂರ್ವ ಆಫ್ರಿಕಾದಿಂದ ಬಂದಿದ್ದು, 60 ಜಾತಿಯ ಸಸ್ಯಗಳು ಮಡಗಾಸ್ಕರ್‌ನಲ್ಲಿ ಕಂಡುಬರುತ್ತವೆ. ಒಂದು ಜಾತಿಯ ಸಸ್ಯಮಾತ್ರ ಅಮೆರಿಕ ಮೂಲದ್ದು. ಆಗ್ನೇಯ ಏಷ್ಯಾದಿಂದ ಚೀನಾದವರೆಗೂ ಇದರ ಸಂತತಿ ವಿಶಾಲವಾಗಿ ವ್ಯಾಪಿಸಿದೆ.

ಕಲಾಂಚೋಯಿ ಸಂಕುಲವನ್ನು ಮೊಟ್ಟ ಮೊದಲ ಬಾರಿಗೆ ಕ್ರಿ.ಶ. 1763ರಲ್ಲಿ ವಿವರಿಸಿ ಜಗತ್ತಿಗೆ ಪರಿಚಯಿಸಿದ ಖ್ಯಾತಿ ಮೈಕೆಲ್ ಆ್ಯಡನ್‌ಸನ್‌ಗೆ ಸಲ್ಲುತ್ತದೆ. ಈ ಹೆಸರು ಚೀನಾ ಭಾಷೆಯಿಂದ ಬಂದಿದೆ.

ಮೂಲಿಕೆಗಳ ಸಾಲಿಗೆ ಸೇರುವ ಬಹುವಾರ್ಷಿಕ ಸಸ್ಯಗಳಾದ ಕಲಾಂಚೋಯಿ 6 ಮೀಟರ್ ಎತ್ತರದವರೆಗೂ ಬೆಳೆಯಬಲ್ಲವು. ಬಹುಪಾಲು ಸಸ್ಯಗಳು ಒಂದು ಮೀಟರ್‌ಗಿಂತ ಕಡಿಮೆ ಎತ್ತರ ಬೆಳೆಯುತ್ತವೆ. ಇವುಗಳನ್ನು ಗೃಹಾಲಂಕಾರದ ಹಾಗೂ ತೋಟದ ಸಸ್ಯಗಳಾಗಿ ಬೆಳೆಸುವುದುಂಟು. ಇವುಗಳು ಬೆಳವಣಿಗೆಗೆ ಹೆಚ್ಚು ನೀರನ್ನು ಅಪೇಕ್ಷಿಸುವುದಿಲ್ಲ. ವಿಭಿನ್ನ ರೀತಿಯ ಹೂಗಳು ಗುಂಪಿನಲ್ಲಿ ಬಿಡುವ ಕಾರಣ ಗಮನ ಸೆಳೆಯುತ್ತವೆ. ಹಾಗೆಯೇ ಚಿಟ್ಟೆಗಳಿಗೆ ಇವು ಆಹಾರ ಒದಗಿಸುತ್ತವೆ.

ಪಾರಂಪರಿಕ ವೈದ್ಯ ಪದ್ಧತಿಯಲ್ಲಿ ಇವುಗಳನ್ನು ಔಷಧಿಯಾಗಿ ಬಳಸಲಾಗುತ್ತಿದೆ. ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಶಕ್ತಿ ಇವುಗಳಲ್ಲಿದೆ. ರಕ್ತದ ಏರು ಒತ್ತಡವನ್ನು ತಗ್ಗಿಸುವ ಗುಣವೂ ಇದೆ.